# ರೈತನ ಮಿತ್ರ ಎರೆಹುಳು

**ಡಾ. ವಾಸುದೇವ ಶರ್ಮಾ ಎನ್.ವಿ.**
ಕಲೆ: ಸಂತೋಷ್ ಸಸಿಹಿತ್ಲು



ಎರೆಹುಳುವೆ, ಎರೆಹುಳುವೆ, ಮಣ್ಣಲಿರುವ ಜೀವವೆ
ಎಷ್ಟು ಕೆಲಸ ಭೂಮಿಯೊಳಗೆ ಯಾರ ಕಣ್ಣಿಗೂ ಬೀಳದೆ
ಕಸವ ಅಗಿದು ಮಣ್ಣ ತಿಂದು ಗೊಬ್ಬರವ ನೀಡುವೆ
ಬೆಳೆಯ ಬೆಳೆವ ನೆಲವನ್ನೆಲ್ಲಾ ಫಲವತ್ತು ಮಾಡುವೆ.

ರೈತ ಮಿತ್ರ ನಿಜವಾಗಿಯೂ ನಿನ್ನ ನೆರವು ಅದ್ಭುತ
ಗಿಡ ಬೆಳೆಸಲು ಮಣ್ಣ ಹದ ಸದಾ ನೀ ಮಾಡುತ
ಮಣ್ಣ ಕೊರೆದು ಬೇರಿನೆಡೆಗೆ ಗಾಳಿ ನೀರು ಕಳುಹಿಸುತ
ಮಣ್ಣೇ ನಮ್ಮ ಜೀವವೆನುವ ನಿನ್ನದೇ ನಿಜ ಕಾಯಕ.

ಎಲೆ ಕಡ್ಡಿ ಸಿಪ್ಪೆ ತಿಪ್ಪೆ ಎರೆಹುಳುವಿಗಾಹಾರ
ರಸಗೊಬ್ಬರ ವಿಷದೌಷಧ ಎರೆಗಪಾಯಕರ
ಎರೆಹುಳಗಳ ಸಲಹಿದರೆ ಭೂಮಿ ನಮ್ಮ ಉಳಿಸುವುದು
ಶಕ್ತಿ ಪುಷ್ಟಿ ಸಿಗಲು ನಮಗೆ ಆಹಾರ ಕೊಡುವುದು.


ಭೂಸಾರ ಬೆಳೆಯಲು ಎರೆ ಹಿಕ್ಕೆಯೇ ಮೂಲ
ಎರೆಹುಳಗಳು ಇದ್ದರೆ ಮಣ್ಣಿಗದೇ ದೊಡ್ಡ ಬಲ
ಮಣ್ಣೇ ಜೀವ ಎನುವ ಹುಳಕೆ ನಮ್ಮ ಪ್ರೀತಿ ತೋರೋಣ
ಹಸಿವ ಕಳೆವ ಹಸಿರು ಬೆಳೆವ ಎರೆಗೆ ಜೈ ಎನ್ನೋಣ.

(ಅಕ್ಟೋಬರ್ 21 ಜಾಗತಿಕ ಎರೆಹುಳು ದಿನ. 1881ರಲ್ಲಿ ಚಾರ್ಲ್ಸ್ ಡಾರ್ವಿನ್ ಬರೆದ ಪುಸ್ತಕ **The Formation of Vegetable Mould Through the Actions of Worms** ಬಿಡುಗಡೆಯಾದ ನೆನಪಿನಲ್ಲಿ 2016ರಿಂದ ಅಕ್ಟೋಬರ್ 21ನ್ನು ಎರೆಹುಳ ದಿನವನ್ನಾಗಿ ಆಚರಿಸಲು **The Earthworm Society of Britain** ಮುಂದಾಯಿತು. ಇದಕ್ಕೆ ವಿಶ್ವಸಂಸ್ಥೆಯ ಮನ್ನಣೆ ಇನ್ನೂ ಸಿಕ್ಕಿಲ್ಲ)

ಕುಂಚ ಪ್ರಪಂಚ



**ಸಾನ್ವಿ ಹಾಲಭಾವಿ**
6ನೇ ತರಗತಿ, ಸಂತ ಇನ್‌ಸ್ಟೈಟ್ ಅಕಾಡೆಮಿ, ಬೆಂಗಳೂರು








**ನಿನಾದ್ ಕಾರಂತ್**
7ನೇ ತರಗತಿ, ಜೆ.ಜಿ.ಆರ್.ವಿ.ಕೆ. ರಾಮಮೂರ್ತಿ ನಗರ, ಬೆಂಗಳೂರು